# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ರಾಮಚಂದ್ರಗೌಡ, ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ ಇವರ ನೇಮಕಾತಿಗೆ ಸಂಬಂಧಪಟ್ಟಂತೆ ಷರತ್ತು ಮತ್ತು ನಿಬಂಧನೆಗಳು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಪಿಡಿ 48 ಎಸ್‌ಪಿಬಿ 2010, ದಿ:22.9.2010
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 121 ಶಿಸನೇ 2010, ದಿನಾಂಕ:4.11.2010
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 125 ಶಿಸನೇ 2002, ದಿನಾಂಕ:27.11.2002
4. ಸರ್ಕಾರದ ಆದೇಶ ಸಂಖ್ಯೆ:ಪಿಡಿ 50 ಎಸ್‌ಪಿಬಿ 2008, ದಿನಾಂಕ:7.8.2008
5. ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ: ಪಿಎಸ್‌ಸಿಎಂ/3116/2010, ದಿನಾಂಕ:25.9.2010
6. ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್ 41 ಜಿಎಂಎಂ 2002, ದಿನಾಂಕ:17.6.2002

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಸರ್ಕಾರವು ಶ್ರೀ ರಾಮಚಂದ್ರಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರನ್ನು ಕರ್ನಾಟಕ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿನ ಸರ್ಕಾರದ ಆದೇಶದಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀ ರಾಮಚಂದ್ರಗೌಡ, ಇವರಿಗೆ ಮುಂದಿನ ಆದೇಶದವರೆಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಲಾಗಿದೆ.

ಮೇಲೆ (6)ರಲ್ಲಿ ಓದಲಾದ ಆದೇಶದಲ್ಲಿ ಸಚಿವರ ಸ್ಥಾನಮಾನ ನೀಡಿರುವ ಪ್ರಾಧಿಕಾರಿಗಳಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಬಹುದು ಎನ್ನುವ ಬಗ್ಗೆ ಮಾರ್ಗಸೂಚಿ ನೀಡಲಾಗಿದೆ.

ಉಲ್ಲೇಖ(3)ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಕಛೇರಿಗೆ ಕೆಳಕಂಡಂತೆ ಸಿಬ್ಬಂದಿಗಳನ್ನು ಗುತ್ತಿಗೆ/ನಿಯೋಜನೆ ಆಧಾರದ ಮೇಲೆ ಪಡೆದುಕೊಳ್ಳಲು ಮಂಜೂರಾತಿ ನೀಡಲಾಗಿದೆ.

| | | |
|---|---|---|
| 1. ಆಪ್ತ ಕಾರ್ಯದರ್ಶಿಗಳು | – | 1 ಹುದ್ದೆ |
| 2. ಆಪ್ತ ಸಹಾಯಕರು | – | 4 ಹುದ್ದೆಗಳು |
| 3. ಕನ್ನಡ ಶೀಘ್ರಲಿಪಿಗಾರರು | – | 1 ಹುದ್ದೆ |
| 4. ವಾಹನ ಚಾಲಕರು | – | 2 ಹುದ್ದೆಗಳು |
| 5. ಡಿ ವೃಂದದ ನೌಕರರು | – | 4 ಹುದ್ದೆಗಳು |
| | | ಒಟ್ಟು = 12 ಹುದ್ದೆಗಳು |

ಮೇಲೆ ಓದಲಾದ (4)ರ ಆದೇಶದಲ್ಲಿ ಉಪಾಧ್ಯಕ್ಷರ ಆಪ್ತ ಶಾಖೆಗೆ ಮೇಲಿನ ಹುದ್ದೆಗಳೊಂದಿಗೆ ಹೆಚ್ಚುವರಿಯಾಗಿ ಎರಡು ವರ್ಷದ ಅವಧಿಗೆ ಕೆಳಕಂಡ ಸಿಬ್ಬಂದಿಗಳನ್ನು ಗುತ್ತಿಗೆ/ನಿಯೋಜನೆ ಆಧಾರದ ಮೇಲೆ ಪಡೆದುಕೊಳ್ಳಲು ಸರ್ಕಾರದ ಅನುಮೋದನೆ ನೀಡಿದ್ದು ಪುನ: ಎರಡು ವರ್ಷದ ಅವಧಿಗೆ ಸದರಿ ಹುದ್ದೆಗಳನ್ನು ಮುಂದುವರೆಸಲು ಆರ್ಥಿಕ ಇಲಾಖೆಯು ಸಹಮತಿ ನೀಡಿರುವಂತೆ ದಿನಾಂಕ:11.5.2010ರ ಸರ್ಕಾರಿ ಆದೇಶ ಸಂಖ್ಯೆ:ಪಿಡಿ 34 ಎಸ್‌ಪಿಬಿ 2010 ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.

| | | |
|---|---|---|
| ವಾಹನ ಚಾಲಕರು | – | 1 ಹುದ್ದೆ |
| ಗ್ರೂಪ್ 'ಡಿ' | – | 2 ಹುದ್ದೆಗಳು |

ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಟಿಪ್ಪಣಿಯಲ್ಲಿ ಶ್ರೀ ರಾಮಚಂದ್ರಗೌಡ, ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಇವರಿಗೆ ಸಚಿವ ಸಂಪುಟದ ಸದಸ್ಯರಿಗಿರುವ ಎಲ್ಲಾ ಸವಲತ್ತುಗಳನ್ನು ಒದಗಿಸಲು ಮಾನ್ಯ ಮುಖ್ಯಮಂತ್ರಿಗಳು ಆದೇಶಿಸಿರುತ್ತಾರೆ.

ಅದರಂತೆ ಈ ಆದೇಶ

<u>ಸರ್ಕಾರದ ಆದೇಶ ಸಂಖ್ಯೆ: ಪಿಡಿ 48 ಎಸ್‌ಪಿಬಿ 2010</u>

<u>ಬೆಂಗಳೂರು, ದಿನಾಂಕ:15.11.2010</u>

ಉಲ್ಲೇಖ(6)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಶ್ರೀ ರಾಮಚಂದ್ರಗೌಡ, ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಇವರಿಗೆ ದಿನಾಂಕ 22.09.2010 ರಿಂದಲೇ ಜಾರಿಗೆ ಬರುವಂತೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಿ ಸರ್ಕಾರ ಆದೇಶಿಸಿರುವಂತೆ ಹಾಗು ಮಾನ್ಯರಿಗೆ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಇತರೆ ಭತ್ಯೆಗಳ ಅಧಿನಿಯಮ, 1956 ಮತ್ತು ಅದರಡಿಯಲ್ಲಿ ರಚಿತವಾಗಿರುವ ನಿಯಮಾವಳಿಗನುಸಾರ ಒಬ್ಬ ಸಂಪುಟ ದರ್ಜೆ ಸಚಿವರಿಗೆ ನೀಡಬೇಕಾದ ಸಂಬಳ, ಭತ್ಯೆಗಳು ಹಾಗೂ ಜಾರಿಯಲ್ಲಿರುವ ಇತರ ಎಲ್ಲಾ ಸವಲತ್ತುಗಳನ್ನೂ ದಿನಾಂಕ 22.09.2010 ರಿಂದ ಅನ್ವಯವಾಗುವಂತೆ ನೀಡಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರ ಉಲ್ಲೇಖ(5)ರಲ್ಲಿನ ಟಿಪ್ಪಣಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/11/10
(ಉಷಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ
16/11/2010

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು(ಎ ಮತ್ತು ಇ) (1 ಮತ್ತು 2)
2. ಶ್ರೀ ರಾಮಚಂದ್ರಗೌಡ, ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ
3. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿ-1, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು
6. ಸರ್ಕಾರದ ಉಪಕಾರ್ಯದರ್ಶಿ(ಆಡಳಿತ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-6)
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ(ರಾಜ್ಯ ಶಿಷ್ಟಾಚಾರ)
9. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
10. ಲೆಕ್ಕಾಧಿಕಾರಿಗಳು, ರಾಜ್ಯ ಯೋಜನಾ ಮಂಡಳಿ
11. ರಕ್ಷಾ ಕಡತ ಹಾಗೂ ಹೆಚ್ಚುವರಿ ಪ್ರತಿಗಳು